490 (637) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಆಗಿರುವ ಸೇತುವೆಗಳ ಸಂಖ್ಯೆ ಎಷ್ಟು; ಎಂದಿನಿಂದ ಪ್ರಾರಂಭಿಸಲಾಗಿದೆ; ಇವುಗಳ ರೂಪುರೇಷೆಗಳೇನು; (ಸಂಪೂರ್ಣ ವಿವರ ನೀಡುವುದು);

ಆ) ಇವುಗಳಲ್ಲಿ ಪ್ರಸ್ತುತ ಉಪಯೋಗಕ್ಕೆ ಬಾರದ ಸೇತುವೆಗಳ ಸಂಖ್ಯೆ ಎಷ್ಟು (ಸಂಪೂರ್ಣ ವಿವರ ನೀಡುವುದು);

ಇ) ಇವುಗಳಲ್ಲಿ ಅಪ್ರೋಚ್ ಆಗದೇ ಇರುವ ಸೇತುವೆಗಳು ಯಾವುವು? (ವಿವರ ನೀಡುವುದು);

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಾಗಡಿ ಕ್ಷೇತ್ರದಲ್ಲಿ 2ನೇ ಹಂತದಲ್ಲಿ ಒಂಬತ್ತು ಸೇತುವೆಗಳನ್ನು ಮತ್ತು 3ನೇ ಹಂತದಲ್ಲಿ ಒಂದು ಸೇತುವೆ ನಿರ್ಮಾಣ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳ ವಿವರಗಳನ್ನು ಅನುಬಂಧದಲ್ಲೂ ಪ್ರತ್ಯೇಕವಾಗಿ ನೀಡಲಾಗಿದೆ.

ಆ) 2ನೇ ಹಂತದ ಕೆಳಕಂಡ ಎರಡು ಸೇತುವೆಗಳಲ್ಲಿ ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಪೂರ್ಣಗೊಂಡಿಲ್ಲದಿರುವ ಕಾರಣ ಕೂಡು ರಸ್ತೆಗಳ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಆದ್ದರಿಂದ, ಈ ಸೇತುವೆಗಳ ವಾಹನ ಸಂಚಾರಕ್ಕೆ ಸಜ್ಜಾಗಿರುವುದಿಲ್ಲ. ಈ ಕೆಳಗಿನ ಎರಡು ಸೇತುವೆಗಳ ಕೂಡ ರಸ್ತೆಗೆ ಬೇಕಾಗಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯಲ್ಲಿ 6(1) ನೋಟಿಫಿಕೇಶನ್ ಹೊರಡಿಸಲಾಗಿರುತ್ತದೆ. ಅಗತ್ಯ ಭೂ ಪರಿಹಾರ ವಿತರಿಸಿ, ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

1. ರಾಮನಗರ ತಾಲ್ಲೂಕಿನ ಎಂ.ಗೋಪಳ್ಳಿ– ಕಂಚುಗಾರನಹಳ್ಳಿ ರಸ್ತೆಯ ಕಿ.ಮೀ 1.00 ರಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.
2. ರಾಮನಗರ ತಾಲ್ಲೂಕು, ಬಾಣಂದೂರು – ಭೈರವನದೊಡ್ಡಿ ರಸ್ತೆಯ ಕಿ.ಮೀ. 2.80ರಲ್ಲಿ ನಲ್ಲಿಗುಡ್ಡ ಕೋಡಿ ಹಳ್ಳಕ್ಕೆ

ಅಡ್ಡಲಾಗಿ ಸೇತುವೆ ನಿರ್ಮಾಣ. ಹಾಗೂ 3ನೇ ಹಂತದ ಸೇತುವೆಗಳಲ್ಲಿ ಮಾಗಡಿ – ಹುಲಿಯೂರು ದುರ್ಗ ರಸ್ತೆಯ ಕಿ.ಮೀ. 35.05 ರಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ದಿನಾಂಕ: 20–03–2010 ರೊಳಗೆ ವಾಹನ ಸಂಚಾರಕ್ಕೆ ಸಜ್ಜಾಗುವುದು.

ಇ) 2ನೇ ಹಂತದ ಕೆಳಕಂಡ ಎರಡು ಸೇತುವೆಗಳಲ್ಲಿ ಕೂಡು ರಸ್ತೆಗಳಿಗೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗಳು ಇನ್ನೂ ಪೂರ್ಣಗೊಂಡಿಲ್ಲದಿರುವ ಕಾರಣ ಕೂಡು ರಸ್ತೆಗಳ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ. ಈ ಕೆಳಗಿನ ಎರಡು ಸೇತುವೆಗಳ ಕೂಡು ರಸ್ತೆಗೆ ಬೇಕಾಗಿರುವ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯಲ್ಲಿ 6(1) ನೋಟಿಫೀಕೇಶನ್ ಹೊರಡಿಸಲಾಗಿರುತ್ತದೆ. ಅಗತ್ಯ ಭೂ ಪರಿಹಾರ ವಿತರಿಸಿ, ಕಾಮಗಾರಿಯನ್ನು ಪೂರ್ಣಗೊಳಿಸ ಲಾಗುವುದು. .

1. ರಾಮನಗರ ತಾಲ್ಲೂಕಿನ ಎಂ.ಗೋಪಳ್ಳಿ– ಕಂಚುಗಾರನಹಳ್ಳಿ ರಸ್ತೆಯ ಕಿ.ಮೀ 1.00 ರಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.
2. ರಾಮನಗರ ತಾಲ್ಲೂಕು, ಬಾಣಂದೂರು – ಭೈರವನದೊಡ್ಡಿ ರಸ್ತೆಯ ಕಿ.ಮೀ. 2.80ರಲ್ಲಿ ನಲ್ಲಿಗುಡ್ಡ ಕೋಡಿ ಹಳ್ಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ.

ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕೆ.ಆರ್.ಡಿ.ಸಿ.ಎಲ್ ಮತ್ತು ಇಂದ ಕೈಗೊಂಡಿರುವ ಸೇತುವೆ ಕಾಮಗಾರಿಗಳು: (ಅನುಬಂಧ)

ಫೇಸ್ – 2 ರ ಸೇತುವೆ ಕಾಮಗಾರಿಗಳು

ಕ್ರ.ಸ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಸೇತುವೆ ಸ್ಪ್ಯಾನ್ ವಿವರಗಳು	ಸೇತುವೆ ಅಗಲ	ಪ್ರಾರಂಭವಾದ ದಿನಾಂಕ	ಮುಕ್ತಾಯ ದಿನಾಂಕ
1	ಮಾಗಡಿ ತಾಲ್ಲೂಕಿನ ಬೆಂಗಳೂರು – ಮಾಗಡಿ – ಹುಲಿಯೂರು ದುರ್ಗ ಕಿ.ಮೀ 42.50 ರಲ್ಲಿ ಸೇತುವೆ ನಿರ್ಮಾಣ	64.50	8.72 ಮೀ ಗಳ 2 ಸ್ಪ್ಯಾನ್	12.00	ಜೂನ್–2006	ಏಪ್ರಿಲ್–2008
2	ಮಾಗಡಿ ತಾಲ್ಲೂಕಿನ ಬೆಂಗಳೂರು – ಮಾಗಡಿ – ಹುಲಿಯೂರು ದುರ್ಗ ಕಿ.ಮೀ 45.40 ರಲ್ಲಿ ಸೇತುವೆ ನಿರ್ಮಾಣ	61.00	6.86 ಮೀ ಗಳ ಒಂದು ಸ್ಪ್ಯಾನ್	12.00	ಏಪ್ರಿಲ್–2006	ಏಪ್ರಿಲ್–2008
3	ಮಾಗಡಿ ತಾಲ್ಲೂಕಿನ ಬೆಂಗಳೂರು – ಮಾಗಡಿ – ಹುಲಿಯೂರು ದುರ್ಗ ಕಿ.ಮೀ 46.60 ರಲ್ಲಿ ಸೇತುವೆ ನಿರ್ಮಾಣ	46.90	6.86 ಮೀ ಗಳ ಒಂದು ಸ್ಪ್ಯಾನ್	12.00	ಸಪ್ಟಂಬರ್–2006	ಮಾರ್ಚ್ 2008
4	ಮಾಗಡಿ ತಾಲ್ಲೂಕಿನ ರಾಮೂರು – ತಿಪಗೊಂಡ ದಬ್ಬೆಯಲ್ಲಿ ಸೇತುವೆ ನಿರ್ಮಾಣ	35.00	4.50 ಮೀ ಅಗಲದ, 2 ಮೀ ಎತ್ತರದ 2 ಬಾಕ್ಸ್‌ಗಳು	12.00	ಮೇ 2006	ಜನವರಿ – 2008
5	ರಾಮನಗರ ತಾಲ್ಲೂಕಿನ ಕೂಟಗಲ್ ಮಾರ್ಗದಲ್ಲಿ ಹಾನುಭೋಗನಹಳ್ಳಿ ಟೂಪ್ ದಬ್ಬೆಯ ಕಿ.ಮೀ 6.50 ರಲ್ಲಿ ಸೇತುವೆ ನಿರ್ಮಾಣ	34.00	4.00 ಮೀ ಅಗಲದ, 2 ಮೀ ಎತ್ತರದ 2 ಬಾಕ್ಸ್‌ಗಳು	12.00	ಮೇ 2006	ಜನವರಿ – 2008
6	ರಾಮನಗರ ತಾಲ್ಲೂಕಿನ ಕೂಟಗಲ್ ಮಾರ್ಗದಲ್ಲಿ ಹಾನುಭೋಗನಹಳ್ಳಿ ಟೂಪ್ ದಬ್ಬೆಯ ಕಿ.ಮೀ 7.05 ರಲ್ಲಿ ಸೇತುವೆ ನಿರ್ಮಾಣ	34.00	4.00 ಮೀ ಅಗಲದ, 2 ಮೀ ಎತ್ತರದ 2 ಬಾಕ್ಸ್‌ಗಳು	12.00	ಮೇ 2006	ಜನವರಿ – 2008
7	ಮುನಿಗನಹಳ್ಳಿಯಲ್ಲಿ ಸುವರ್ಣಮುಖಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	141.00	10.96 ಮೀ ಗಳ 4 ಸ್ಪ್ಯಾನ್‌ಗಳು	12.00	ಸಪ್ಟಂಬರ್–2006	ಮಾರ್ಚ್–2008
8	ರಾಮನಗರ ತಾಲ್ಲೂಕು ಎಂ. ಗೋಪ್ಯ – ಕಂಚುಗಾರನಹಳ್ಳಿಯ ಕಿ.ಮೀ 1.00 ರಲ್ಲಿ ವೃಷಭಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	94.00	10.96 ಮೀ ಗಳ 6 ಸ್ಪ್ಯಾನ್‌ಗಳು	8.50	ಜೂನ್ – 2006	ಭೂಸ್ವಾಧೀನದ ಆದೇಶದಿಂದ ಅಪೂರ್ಣ ದಬ್ಬೆಗಳು ಹೊಸದಾಗಿಂದಿರುತ್ತದೆ.
9	ರಾಮನಗರ ತಾಲ್ಲೂಕು ಹಾನುಬೋಗನಹಳ್ಳಿ – ಕೈಲಾಸಮೊಳ್ಳಿ ದಬ್ಬೆಯ ಕಿ.ಮೀ 2.8 ರಲ್ಲಿ ನಲ್ಲಿದಾಸ್ಥ ಕೊಂಡ ಹಳ್ಳಕ್ಕೆ ಸೇತುವೆ ನಿರ್ಮಾಣ	64.60	10.72 ಮೀ ಗಳ 2 ಸ್ಪ್ಯಾನ್‌ಗಳು	10.00	ಜೂನ್ – 2006	ಭೂಸ್ವಾಧೀನದ ಆದೇಶದಿಂದ ಅಪೂರ್ಣ ದಬ್ಬೆಗಳು ಹೊಸದಾಗಿಂದಿರುತ್ತದೆ.

ಫೇಸ್ – 3

ಕ್ರ.ಸ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಸೇತುವೆ ಸ್ಪ್ಯಾನ್ ವಿವರಗಳು	ಸೇತುವೆ ಅಗಲ	ಪ್ರಾರಂಭವಾದ ದಿನಾಂಕ	ಮುಕ್ತಾಯ ದಿನಾಂಕ
1	ಮಾಗಡಿ – ಹುಲಿಯೂರು ದುರ್ಗ ದಬ್ಬೆಯ ಕಿ.ಮೀ 38.00 ರಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ	378.00	18.00 ಮೀ ಗಳ 4 ಸ್ಪ್ಯಾನ್‌ಗಳು	12	ಜೂ–2007	ಸ್ಥಳದ ಕೆಲವು ಮಾಲೀಕರ ಅಪೂರ್ಣ ದಬ್ಬೆಗಳ ಕಾಮಗಾರಿ ಪ್ರಗತಿಯಲ್ಲಿದ್ದು, ಸೇತುವೆ ಕಾಮಗಾರಿ 20–03–2010 ರೊಳಗೆ ಮುಕ್ತಾಯವಾಗುವುದು